೨೧೫೨(೨೭೩೧)

ಶ್ರೀ ಪಿ.ಹೆಚ್.ಪೂಜಾರ್(ಬಾಗಲಕೋಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ನಿರ್ಮಾಣ ನಿಗಮದಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ತೆಗೆದುಕೊಂಡಿರುವ ಕ್ರಮಗಳೇನು?

ಆ) ಎಷ್ಟು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ; ಈ ವ್ಯವಹಾರದಲ್ಲಿ ಯಾವ ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ, ಇವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):

ಅ) ಗಮನಕ್ಕೆ ಬಂದಿದೆ. ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ಕರ್ನಾಟಕ ರಾಜ್ಯ ನಿರ್ಮಾಣ ನಿಗಮದಲ್ಲಿ ೧೯೯೦-೯೧ ರಿಂದ ೧೯೯೪-೯೫ರ ಅವಧಿಯಲ್ಲಿ ನಡೆದಿದೆಯೆನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿ ವಿಚಾರಣಾ ಆಯೋಗವನ್ನು ನೇಮಿಸಿದೆ.

೨) ಕೆ.ಆರ್.ಎಸ್.ಆಧುನೀಕರಣ ಕಾಮಗಾರಿಗಳಲ್ಲಿ ನಡೆದಿದೆಯೆನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟವರ ವಿರುದ್ಧ ಕರ್ನಾಟಕ ಸರ್ಕಾರಿ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು)ನಿಯಮಾವಳಿಗಳು ೧೯೫೭ರ ನಿಯಮ ೧೧ರ ರೀತ್ಯ ಇಲಾಖಾ ವಿಚಾರಣೆ ಹೂಡಲಾಗಿದೆ.

ಆ) ವಿಚಾರಣಾ ಆಯೋಗದ ವರದಿ ಮತ್ತು ವಿಚಾರಣಾ ಅಧಿಕಾರಿಗಳ ವರದಿ ಬಂದ ನಂತರ ನಷ್ಟದ ನಿಖರವಾದ ಮೊತ್ತವೆಷ್ಟು ಎಂದು ತಿಳಿದು ಬರುತ್ತದೆ. ಅಧಿಕಾರಿಗಳ ಹೆಸರು ಆಯೋಗದ ವರದಿ ಬಂದ ನಂತರ ತಿಳಿದು ಬರುತ್ತದೆ. ವಿಚಾರಣಾ ಆಯೋಗ: ವಿಚಾರಣಾ ಅಧಿಕಾರಿಗಳ ವರದಿ ಬಂದ ನಂತರ ಅದರ ಪ್ರಕಾರ ತಪ್ಪಿತಸ್ಥರೆಂದು ಕಂಡು ಬಂದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ವಿಚಾರಣಾ ಆಯೋಗದ ವರದಿ ಬಂದ ನಂತರ ಸಂಬಂಧಪಟ್ಟವರಿಂದ ನಷ್ಟದ ಮೊತ್ತ ವಸೂಲಾತಿಗೆ ಕ್ರಮ ಜರುಗಿಸಲಾಗುವುದು.

ಮುಂಡರಗಿ ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಆಸ್ಪತ್ರೆ ಹಾಗೂ ಕೃತಕ ಗರ್ಭಧಾರಣ ಕೇಂದ್ರಗಳ ಸಂಖ್ಯೆ.

೨೧೫೫೩(೨೬೧೩)

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಎಷ್ಟು ಪಶುವೈದ್ಯಕೀಯ ಆಸ್ಪತ್ರೆ ಹಾಗೂ ಕೃತಕ ಗರ್ಭಧಾರಣಾ ಕೇಂದ್ರಗಳು ಇವೆ. ವ್ಯಂದಾನುಸಾರ ಖಾಲಿ ಇರುವ ಹುದ್ದೆಗಳು ಎಷ್ಟು; ಖಾಲಿ ಇದ್ದಲ್ಲಿ ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೆ?

ಶ್ರೀ ಎ.ಕೃಷ್ಣಪ್ಪ(ಪಶುಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಪಶುವೈದ್ಯಕೀಯ ಆಸ್ಪತ್ರೆ - ೧

ಕೃತಕ ಗರ್ಭಧಾರಣಾ ಕೇಂದ್ರ - ೩

ಖಾಲಿ ಇರುವ ಹುದ್ದೆಗಳು

ಸಹಾಯಕ ನಿರ್ದೇಶಕರು - ೧

ಪಶುವೈದ್ಯಾಧಿಕಾರಿ - ೧

ಪಶುವೈದ್ಯ ಸಹಾಯಕರು - ೧

'ಡಿ' ದರ್ಜೆ ನೌಕರರು - ೧

ಒಟ್ಟು	೪

ಇದು ಪರಿಶೀಲನೆಯಲ್ಲಿದೆ-

ರಾಜ್ಯದಲ್ಲಿರುವ ಅರಣ್ಯ ಪ್ರದೇಶಗಳ ಅಭಿವೃದ್ಧಿ.

೨೧೫೫೫(೨೬೭೭)

ಶ್ರೀ ರಾಮದಾಸ್ ಎ (ಕೃಷ್ಣರಾಜ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ೩ ವರ್ಷಗಳಲ್ಲಿ ಬಜೆಟ್‌ನಲ್ಲಿ ಇಲಾಖೆಗೆ ನೀಡಿದ ಹಣ ಎಷ್ಟು?